**ದಿನಾಂಕಃ 16.06.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀಸವಾಲುಃ ಆರೋಪಿ ಪರ ಶ್ರೀ ಕೆ.ಆರ್.ಜೆ ವಕೀಲರಿಂದಃ-**

67. ಆ ದಿನ ನಾವು ಭಾರ್ಗವ ಹೋಟೆಲ್ ಬಳಿ ಹೋದಾಗ ಸಂಜೆ ಸುಮಾರು 4.30 ರಿಂದ 5 ಗಂಟೆ ಆಗಿತ್ತು. ಭಾರ್ಗವ ಹೋಟೆಲ್ ಬಳಿಗೆ ಹೋಗುವ ಮೊದಲು ನಾವು ಸಿಟಿ ಬಸ್ ಸ್ಟ್ಯಾಂಡ್ ಬಳಿ ಇದ್ದೆವು. ಸಿಟಿ ಬಸ್ ಸ್ಟ್ಯಾಂಡ್ ನಿಂದ ಬಾರ್ಗವ ಹೋಟೆಲಿಗೆ ಅಂದಾಜು 2 ರಿಂದ 3 ಕಿ.ಮೀ ಇದೆ. ಸಿಟಿ ಬಸ್ ಸ್ಟ್ಯಾಂಡ್ ಬಳಿಗೆ ಅಂದಾಜು 3.20 ಗಂಟೆಗೆ ಹೋಗಿದ್ದೆವು. ಸಾಕ್ಷಿ ಪುನಃ ಹೇಳುತ್ತಾರೆ, ಸಿಟಿ ಬಸ್ ಸ್ಟ್ಯಾಂಡ್‌ಗೆ ಹೋದ ಬಳಿಕ ಆರೋಪಿ 5 ಗಂಟೆಗೆ ಬರುತ್ತೇನೆಂದು ಹೇಳಿದ್ದರಿಂದ ಪುನಃ ವಾಪಸ್ಸು ಠಾಣೆಗೆ ಹೋಗಿದ್ದೆವು. ಅಂದಾಜು 3.45 ಕ್ಕೆ ಠಾಣೆಗೆ ವಾಪಸ್ಸು ಹೋಗಿದ್ದೆ. ನಂತರ ಸಂಜೆ ಅಂದಾಜು 4.30 ಕ್ಕೆ ಠಾಣೆಯಿಂದ ಹೊರಟು ಭಾರ್ಗವ ಹೋಟೆಲಿಗೆ ಹೋಗಿದ್ದೆವು. ಭಾರ್ಗವ ಹೋಟೆಲಿಗೆ ಹೋದಾಗ ಎಷ್ಟು ಸಮಯ ಆಗಿತ್ತೆಂದು ನಿಖರವಾಗಿ ಹೇಳಲು ನೆನಪಿಲ್ಲ.

68. Entrustment ಮಹಜರ್ ಕಾಲಕ್ಕೆ ಪಿರ್ಯಾದುದಾರರ ಅಂಗಶೋಧನೆ ಮಾಡಿದ್ದೆವು. ಆ ಕಾಲಕ್ಕೆ ಪಿರ್ಯಾದುದಾರರ ಬಳಿ ಯಾವುದೇ ಕಾಗದ ಪತ್ರಗಳು ಇದ್ದ ಬಗ್ಗೆ ಗೊತ್ತಿಲ್ಲ. ಸಾಕ್ಷಿ ಸ್ವತಃ ಹೇಳುತ್ತಾರೆ, ಆ ಕಾಲಕ್ಕೆ ಪಿರ್ಯಾದುದಾರರ ಬಳಿ ಆರೋಪಿತರಿಗೆ ಹಾನಿಯಾಗುವ ಯಾವುದೇ ವಸ್ತುಗಳು ಇಲ್ಲವೆಂದು ಖಚಿತಪಡಿಸಿಕೊಂಡಿದ್ದೆ. ದೂರು ಕೊಡುವ ಕಾಲಕ್ಕೆ ಅಥವಾ Entrustment ಮಹಜರ್ ಕಾಲಕ್ಕೆ ಪಿರ್ಯಾದುದಾರರು ಸ್ವಯಂ ಘೋಷಿತ ದೃಡೀಕರಣ ಪತ್ರ ಮತ್ತು ಕಳುವಾಗಿರುವ ಬಸ್ ಟಿಕೆಟ್ ಗಳನ್ನು ಕೊಡಬೇಕೆಂದು ಹೇಳಿಲ್ಲ.

69. ಆರೋಪಿತರು ಪಿರ್ಯಾದುದಾರರಿಗೆ ಜೂನ್ ತಿಂಗಳ ಮಾಹೆಯಲ್ಲಿ ಅರ್ಧ ವೇತನವನ್ನು ನನಗೆ ಆರ್ಥಿಕ ಸಮಸ್ಯೆ ಇರುವುದರಿಂದ ಕೊಡಬೇಕಾಗಿ ಕೋರಿಕೊಳ್ಳುತ್ತೇನೆ ಎಂದು ಫೋನ್

ಸಂಭಾಷಣೆ ಕಾಲಕ್ಕೆ ಹೇಳಿರುವುದು ನಿಶಾನೆ ಪಿ–12 ರಲ್ಲಿ ನಮೂದಿದೆ ಎಂದರೆ ನಿಜ. ನಿಶಾನೆ ಪಿ–12 ರಲ್ಲಿ ಆರೋಪಿ ಬೇಡ ಬಿಡು, ನಾನು ಇದಿದ್ದರೂ ಅವೆಲ್ಲಾ ಚೆಕ್ಕು ಅದೆಲ್ಲಾ ತೆಗೆದುಕೊಂಡು ಬರುತ್ತೀನಿ, ನೀನು ಬರುವುದು ಬೇಡ ಟಿಕೇಟ್ ನನ್ನ ಕೈಯಲ್ಲಿ ಕೊಟ್ಟು ಬಿಡು, ಇದರಲ್ಲೇ ಒಂದು ಸೈನ್ ಹಾಕಿ ಕೊಟ್ಟುಬಿಡುತ್ತೀನಿ, ಅಲ್ಲೇನೆ ಟಿಕೆಟ್ ಪಡೆದಿರುತ್ತಾರೆ ಎಂದು ಹೇಳಿರುವುದು ನಿಜ. ನಿಶಾನೆ ಪಿ–12 ರಲ್ಲಿ ನಮೂದಿರುವ ಸಂಭಾಷಣೆಯಲ್ಲಿ ಎಲ್ಲಿಯೂ ಹಣ ಕೊಡುವ ಬಗ್ಗೆ ನಮೂದು ಇದೆ ಎಂದರೆ ಸರಿಯಲ್ಲ. ನಿಶಾನೆ ಪಿ–12 ರ ಪುಟಸಂಖ್ಯೆ 5 ರಲ್ಲಿ ಆರೋಪಿ ನಿಮ್ಮದು ಅದೆಷ್ಟು ಕೊಡಬೇಕು, ಅದೇನು ಹೇಳಿಲ್ಲ ಎಂದು ಹೇಳಿದ್ದ ಬಗ್ಗೆ ನಮೂದು ಇಲ್ಲ. ಆ ಕಾಲಕ್ಕೆ ಆರೋಪಿ ಅದೇ ಬರ್ತಿನಿ ಮಾತಡೋಣ ಅವರು ಹೇಳಿದರೆ ಕೇಳುತ್ತಾ ಇದ್ದರು ಅದಕ್ಕೆ ಇನ್ನು ಚೆಕ್ ತೆಕ್ಕೊಂಡಿಲ್ಲ ಎಂದು ಹೇಳಿದೆ ಎಂದು ಹೇಳಿದ ಬಗ್ಗೆ ನಮೂದು ಇದೆ. ಆನಂತರದಲ್ಲಿ ಪಿರ್ಯಾದಿ ಅಲ್ಲಾ ಸರ್ ಇಷ್ಟು ಅಂತ ಹೇಳಿದರೆ ಸರಿ ಎಂದು ಹೇಳಿದ ಬಗ್ಗೆ ಆಗ ಆರೋಪಿ ಹಾ ಎಂದು ಹೇಳಿದ ಬಗ್ಗೆ ನಂತರ ಪಿರ್ಯಾದಿ ಅಡ್ಜಸ್ಟ್ ಆದರೆ ತಂದುಬಿಡುತ್ತೇನೆ ಎಂದು ಪಿರ್ಯಾದಿ ಹೇಳಿದ ಬಗ್ಗೆ ಮತ್ತು ಆ ಕಾಲಕ್ಕೆ ಆರೋಪಿ ಈಗ ಅದು 70 ಆಗಿತ್ತು ಒಂದು ಮೂರು ಜಾಸ್ತಿ ಮಾಡವ್ ರೆ, ಪೇ ಸ್ಲಿಪ್ ಎಲ್ಲಾ ತರ್ತಿನಿ, ಒಂದು ಹತ್ತು ಇಸ್ ಕೊಟ್ಟುಬಿಡಿ ಎಂದು ಹೇಳಿದ ಬಗ್ಗೆ ನಮೂದು ಇದೆ. ನಂತರ ಪಿರ್ಯಾದಿ ಹತ್ತಾ ಎಂದು ಹೇಳಿದಾಗ ಆರೋಪಿ ಹೂ ಎಂದು ಹೇಳಿದ ಬಗ್ಗೆ ಸಹ ನಮೂದು ಇದೆ. ಆ ಸಂಭಾಷಣೆಯಲ್ಲಿ ಎಲ್ಲಿಯಾದರೂ ಹತ್ತು ಸಾವಿರ ಹಣ ತರಬೇಕೆಂದು ಕೇಳಿದ ಬಗ್ಗೆ ನಮೂದು ಇದೆಯಾ ಎಂದರೆ ಅದೇ ಶಬ್ದಗಳಲ್ಲಿ ನಮೂದಿಲ್ಲ ಆದರೆ ಹತ್ತು ಎಂದು ನಮೂದು ಇದೆ. ಆ ಸಂಭಾಷಣೆಯಲ್ಲಿ ಕೇವಲ ಟಿಕೇಟ್ ತರುವ ಬಗ್ಗೆ ಮಾತ್ರ ನಮೂದು ಇದೆ ಎಂದರೆ ಸರಿಯಲ್ಲ.

70. ಪಿರ್ಯಾದುದಾರರು ತಮ್ಮ ಸ್ವಯಂ ಘೋಷಣೆ ಪತ್ರದಲ್ಲಿ ಆರೋಪಿಗೆ ಗೊತ್ತಾಗದಂತೆ ಹಣವನ್ನು ಇಟ್ಟು ಅವರನ್ನು ಈ ಪ್ರಕರಣದಲ್ಲಿ ಸಿಕ್ಕಿ ಹಾಕಿಸಿದ್ದಾರೆ ಎಂದರೆ ಸರಿಯಲ್ಲ.

71. FSL ವರದಿಯಲ್ಲಿ ಆರೋಪಿತನ ಪ್ಯಾಂಟ್ ಜೇಬನ್ನು ತೊಳೆದಾಗ ಅದರಲ್ಲಿ ಪಿನಾಪ್ತಲೀನ್ ಪುಡಿ ಇರುವುದಿಲ್ಲ ಎಂದು ನಮೂದಿಸಿದ್ದಾರೆ ಎಂದರೆ ನಿಜ. FSL ವರದಿಯಲ್ಲಿ ನಮೂದಿರುವ ಆರ್ಟಿಕಲ್ ನಂಬರ್:-6 ರಲ್ಲಿನ ಬಣ್ಣವಿಲ್ಲದ ದ್ರಾವಣ ಟ್ರ್ಯಾಪ್ ಮಹಜರ್ ಕಾಲದಲ್ಲಿ ಮಾದರಿಯಾಗಿ ಸಂಗ್ರಹಿಸಿದ ಸೋಡಿಯಂ ಕಾರ್ಬೋನೇಟ್ ದ್ರಾವಣ ಇದೆ. Entrustment ಮಹಜರ್ ಕಾಲಕ್ಕೆ ಮಾದರಿ ಸೋಡಿಯಂ ಕಾರ್ಬೋನೇಟ್ ದ್ರಾವಣವನ್ನು ಕಳುಹಿಸುವುದಿಲ್ಲ ಎಂದರೆ ನಿಜ. FSL ವರದಿಯ ಆರ್ಟಿಕಲ್ 14 ಆರೋಪಿಯ ಪ್ಯಾಂಟನ್ನು ತೊಳೆದ ದ್ರಾವಣ ಇದೆ ಎಂದರೆ ನಿಜ.

72. ಆರೋಪಿತರು ಪಿರ್ಯಾದುದಾರರನ್ನು ಯಾವತ್ತೂ ಹಣ ಕೊಡುವಂತೆ ಕೇಳಿಲ್ಲ ಎಂದರೆ ಸರಿಯಲ್ಲ. ಪಿರ್ಯಾದುದಾರರನ್ನು ಕೆಲಸದಿಂದ ಅಮಾನತ್ತು ಮಾಡಿದ್ದಾರೆ ಎಂಬ ಕಾರಣಕ್ಕೆ ಇಲಾಖೆಗೆ ಕೆಟ್ಟ ಹೆಸರು ತರುವ ಉದ್ದೇಶದಿಂದ ಪಿರ್ಯಾದುದಾರರು ಸ್ವಯಂ ಘೋಷಣೆ ಪತ್ರದಲ್ಲಿ ಆರೋಪಿತರಿಗೆ ಗೊತ್ತಾಗದಂತೆ ಹಣ ಇಟ್ಟು ಅವರನ್ನು ಈ ಪ್ರಕರಣದಲ್ಲಿ ಸಿಲುಕಿಸಿದ್ದಾರೆ ಎಂದರೆ ಸರಿಯಲ್ಲ. ಆರೋಪಿತರಿಗೆ ಹಣ ಕೊಡುವ ಅಥವಾ ಚೆಕ್ ಕೊಡುವ ಕರ್ತವ್ಯ ವಹಿಸಿರಲಿಲ್ಲ ಅಥವಾ ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ: ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

Sd/-

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಮೈಸೂರು.